# ನಲ್ಲಮಲ್ಲ ಯುದ್ಧರಂಗದಲಿ ಹುಟ್ಟಿದ
## ಕಾ. ಜೀವನ್

ಮೇದಕ್ ಮಿಂಚು
ಹೋರಾಟಕ್ಕೆ ಬೆಳಕು
ದನಿವರಿಯದ ಶ್ರಮಜೀವಿ
ಪ್ರೇಮವನ್ನು ಹಂಚುವ ಸ್ನೇಹಜೀವಿ
ಮೂಕ ಪ್ರಾಣಿಗಳನ್ನು ಮುದ್ದಾಡುವ
ದೊಡ್ಡ ಮನಸ್ಸು ನಿನ್ನದು
ಹಳ್ಳಿಯ ತಮ್ಮಂದಿರನ್ನು
ಸೇರುವ ಆಲಯ ನೀನು
ದಳಕ್ಕೆ ಶ್ವಾಸಕೋಶ ನೀನು
ಬಾಕಿಗಳ ಚೆಂಡಾಡುವ ಸಿಂಹ ನೀನು
ಅರಣ್ಯದಲ್ಲಿ ಗಿರಿಜನರ
ಗುಡಿಸಲು ಬೆಳಗುವ ಹಣತೆ ನೀನು
ಅವರ ಆಟ-ಪಾಠಗಳ ತಮಟೆಯಾದೆ

ದಲಿತರ ಗುಂಡಿಗೆಯಲಿ
ಚಿರಕಾಲ ಚಿರಂಜೀವಿಯಾದೆ
ಅವರ ಹೃದಯ ಮಿಡಿತವಾದೆ
ನಾಯಕತ್ವಕ್ಕೆ ರಕ್ಷಣೆ ಕೋಟೆಯಾದೆ
ಕೋಟ್ಯಾಂತರ ಜನರ
ಗಂಟಲ ನಾಲಿಗೆ ನೀನಾದೆ
ದಮನಿತ ಅಕ್ಕಂದಿರಿಗೆ
ಅತ್ಯಾಚಾರಕ್ಕೊಳಗಾದ ತಂಗಿಯರಿಗೆ
ಹೋರಾಟವನ್ನು ಕಲಿಸಿದ
ಬದುಕಿನ ದಾರಿ ತೋರಿಸಿದ
ಸ್ವತಂತ್ರ ಜೀವಿ ನೀನಾದೆ
ಮೀನುಗಾರರ ಉಸಿರಾದೆ
ಅವರ ಕೈಯಲ್ಲಿರುವ ಹುಟ್ಟಾದೆ
ಕಾರ್ಮಿಕರ ಕಣ್ಣಾದೆ
ಅವರ ಹೋರಾಟ ಜೀವನದಲ್ಲಿ
ಮಿನುಗುವ ಗನ್ನಾದೆ

ಗ್ರೇಹೌಂಡ್ಸ್ ಗುಂಡುಗಳಿಗೆ ಕಂಪನವಾದೆ
ದೇಶಕ್ಕೆ ಬೆಳಕು ನೀಡುವ ಚಂದ್ರನಾದೆ
ಉದಯಿಸುವ ಸೂರ್ಯಹಸ್ತವಾದೆ
ಪ್ಯಾರ ಮಿಲಿಟರಿ ಕಂಪನಿಗಳಿಗೆ
ಮೂಗುದಾರ ಹಾಕಿದವನು
ಮಾಹಿತಿದಾರರನ್ನು ಮಟ್ಟ ಹಾಕಿದವನು
ನೀನು ಪೂರ್ವ ದಿಕ್ಕಿನವನು
ಜೈಲುಗೋಡೆಗಳನ್ನು ಮುರಿದು
ಹೋರಾಟದಲಿ ಪಯಣಿಸಿದ
ವೀರ ಯೋಧ ನೀನು
ನಿನ್ನ ಸಂಗಾತಿಗಳಿಗೆ
ಧೈರ್ಯ ನೀಡುವ ಧರ್ಮಾತ್ಮನಾದೆ
ಕಡು ಹಸಿರು ಯೂನಿಫಾರಂನಲ್ಲಿ
ಚೆಲುವನಾದ ವೀರ ನೀನು
ನನ್ನ ಹೃದಯವನು ಗೆದ್ದವ

ನನಗೆ ಅಮ್ಮನ ಮಡಿಲಾದೆ
ರಣರಂಗದ ಮಡಿಲಲಿ
ಜನರ ಹೋರಾಟ ಗೀತೆಯಾದೆ
ಮರೆಯಲಾರದ ಮಿತ್ರನಾದೆ

ಕೃಷ್ಣ ನದಿಯ ಅಲೆಗಳು
ನಿನ್ನನ್ನು ಕೇಳುತ್ತಿವೆ ಜೀವನ್
ನಿನ್ನನ್ನು ಕೇಳುತ್ತಿವೆ ...
ಮುಗುಳ್ನಗೆಯ ಮುದ್ದು ಕೃಷ್ಣ
ಎಲ್ಲಿ ಹೋದ ಎನ್ನುತಿದೆ ಕೃಷ್ಣಾ ನದಿ
ಜೀವನ್ ನಿನ್ನನ್ನು ಕನವರಿಸುತ್ತಾಳೆ
ಕೃಷ್ಣ ನದಿಯಮ್ಮ
ಪ್ರಭುತ್ವವನ್ನು ಸೋಲಿಸಿದ
ಕೆಂಪು ನಕ್ಷತ್ರವಾದೆ
ಮುನ್ನುಗ್ಗಿ ಬರುತ್ತಿರುವ
ಎಸ್‌ಐಬಿ ಪೊಲೀಸ್ ಗೂಂಡಾಗಳಿಗೆ
ಮಿನುಗುವ ರಕ್ತವಾದೆ
ಕ್ರಾಂತಿಕಾರಿ ಯುದ್ಧರಂಗದಲಿ
ಉಸಿರು ನೀಡಿದವನು ನೀನಾದೆ

- ಶ್ಯಾಮಲ

## ಮುದ್ದು ಕಂದ ಕಾ. ಮೌನಿಕನಿಗೆ ಕಣ್ಣೀರಿನ ಲಾಲ್ ಸಲಾಂ

ಸ್ವಾರ್ಥ ಅರಿಯದ ಹಸಿ ಕಂದಮ್ಮ
ಮರೆಯಲಾರೆ ನಿನ್ನ ಮರಣವನ್ನು
ಅಮ್ಮನ ಹಾಲು ರುಚಿ ತಿಳಿಯದ ಕಂದಮ್ಮ
ನಿದ್ರಿಸಿದೆ ನೀ ಭೂತಾಯಿಯ ಮಡಿಲಲ್ಲಿ

ಜನರ ಗುಂಡಿಗೆಯನ್ನು ಅಪ್ಪಿಕೊಂಡು
ಸೇರಿದೆ ಕೆಂಪು ಶಿಖರವನ್ನು
ಸೇರಿದೆ ಕೆಂಪು ವನವನ್ನು
ಚಿಗುರೊಡೆದ ಅರಿಶಿನ ಗಿಡವನ್ನು
ನೆಲ ಬಗೆದರೆಂದು ಗೊಳ್ಳೆಂದರು

ತಂದೆಯ ಗುಂಡಿಗೆಯಲ್ಲಾಡುವ ಕಂದಮ್ಮ
ಬಚ್ಚಿಟ್ಟುಕೊಂಡೆ ಹೋರಾಟ ತಾಯಿಯ
ಗುಂಡಿಗೆಯಲ್ಲಿ
ತಾಯಿ ಗುಂಡಿಗೆಯಲ್ಲಿ ಜೋಗುಳವಾಡುವ
ಕಂದಮ್ಮ
ಹರೆಯದ ವಯಸ್ಸಿನಲ್ಲಿ
ಸೋಲಿಸಿದೆ ಪೈಶಾಚಿಕ ರಾಜ್ಯವನ್ನು
ಕೆಂಪೇರಿಸಿದೆ ಪ್ರಪಂಚವನ್ನು

ಶತೃವಿಗೆ ನಿನ್ನ ನಗು
ತುಪಾಕಿ ಗುಂಡುಗಳಂತೆ
ಖಾಕಿಗಳಿಗೆ ನಿನ್ನ ನೋಟ
ಝಳಪಿಸುವ ಕತ್ತಿಯಂತೆ
ಶೋಷಕ ರಾಜ್ಯಕ್ಕೆ ನಿನ್ನ ನಡಿಗೆ
ಬಾಂಬುಗಳ ಸ್ಫೋಟದಂತೆ
ಓ ಮುದ್ದು ಕಂದ ಮೌನಿಕ
ನಿನ್ನ ತ್ಯಾಗ ಉನ್ನತವಾದುದು
ನಿನ್ನ ಆಶಯ ಶಾಶ್ವತವಾದುದು
ನಿನ್ನ ಮರಣ ಪ್ರಜಾತಂತ್ರವನ್ನು
ಸಾಧಿಸುತ್ತದೆ

ಓ ಕೆಂಪು ಮುದ್ದು ಕಂದ
ನಿನಗೆ ಹಳ್ಳಿ ತಾಯಂದಿರ
ಕೆಂಪು ವಂದನೆ
ಓ ಮೌನಿಕ ನಿನಗೆ
ನನ್ನ ಕಣ್ಣೀರಿನ ಲಾಲ್ ಸಲಾಂ

- ಶ್ಯಾಮಲ

## ವರ್ಗ ಸಂಘರ್ಷದಲ್ಲಿ ಅಮರನಾದ ನೀನು

ಯಾವ ತಾಯಿಯ ಮಗನೋ
ವರ್ಗ ಸಂಘರ್ಷದಲಿ
ಒಂದಾದ ಸೈನಿಕ ನೀನು
ಜಾತಿ-ಮತ ಬೇರೆಯಾದರೂ
ಶೋಷಿತ ಜನರ ಗುರಿ ಒಂದೇ ಎಂದು
ಸಾರಿ ಹೇಳಿದೆ ನೀ ಸೀನು
ಕಷ್ಟ ಜೀವಿಗಳ ಕಷ್ಟವನ್ನು ಓದಿದವನು
ಬಡ ತಾಯಂದಿರನ್ನು ಪ್ರೀತಿಸಿದ
ಪ್ರಜಾ ಯುದ್ಧ ವೀರನು ನೀ ಸೀನು

ಮುನ್ನುಗ್ಗಿ ಬರುತ್ತಿರುವ
ಶತೃ ಗುಂಡಾಗಳನ್ನು
ಆಂಬುಶ್‌ನಿಂದ ಓಡಿಸಿದವನು
ಭೂತಾಯಿಯನ್ನು ಮುದ್ದಾಡಿ
ಭೂ ಹೋರಾಟದಲ್ಲಿ
ಮಾರ್ಗವಿದೆಯೆಂದು
ಹಳ್ಳಿ ಜನರನ್ನು ಒಗ್ಗೂಡಿಸಿ
ಭೂಮಾಲೀಕರೆಡೆಗೆ ಬೆಟ್ಟು
ತೋರಿಸಿದ ಸೈನಿಕ ನೀನು

ಅಮ್ಮನನ್ನು ಮರೆಯಲಾರದ ನನಗೆ
ಅಮ್ಮನಾದೆ
ತಂದೆಯನ್ನು ಮರೆಯಲಾರದ ನನಗೆ
ತಂದೆಯಾದೆ
ವರ್ಗ ಶತೃವನ್ನು ತೋರಿಸಿ
ಧೈರ್ಯ ತುಂಬಿದೆ
ನನಗೆ ಆದರ್ಶವಾದೆ
ನಿನಗೆ ವಿದ್ಯಾರ್ಥಿಗಳ ಕೆಂಪು ವಂದನೆ
ನನ್ನ ಹೃದಯ ಪೂರ್ವಕ ಕೆಂಪು ವಂದನೆ

- ಶ್ಯಾಮಲ

## ಕ್ರಾಂತಿಕಾರಿ ಮಿತ್ರರಿಗೆ ಲಾಲ್ ಸಲಾಂ

ಕೋಟ್ಯಾಂತರ ಗಿಡಗಳಲಿ
ಯಾವ ಕೊಂಬೆಯ ಹೂಗಳೋ
ಸಶಸ್ತ್ರ ಹೋರಾಟದಲಿ ಒಂದಾದ
ಅರಣ್ಯ ಮಲ್ಲಿಗೆ ಹೂಗಳು
ಜಾತಿ ಮತಗಳೊಂದಿಗೆ
ಕಿತ್ತು ತಿನ್ನುವ
ರಕ್ಕಸ ರಾಜ್ಯವನ್ನು ನಾಶ ಮಾಡಲು
ಒಂದೊಂದು ಹನಿ ರಕ್ತವನ್ನೂ
ತ್ಯಾಗ ಮಾಡುವ ಅರಣ್ಯ ಮಕ್ಕಳು

ಸಂಗಾತಿಗಳೇ ... ನಿಮ್ಮನ್ನು
ಕಳಿಸಬೇಕೆಂದರೆ ನನಗೆ
ಬಾಧೆಯಾಗಿದೆ
ನಮ್ಮದು ವರ್ಗ ಹೋರಾಟದ ಸಂಬಂಧ
ನಿಮ್ಮ ಆತ್ಮೀಯತೆ
ನನ್ನನ್ನು ಹತ್ತಿರಗೊಳಿಸಿದೆ
ನಿಮ್ಮನ್ನು ಅಕ್ಕ ಎಂದು ಕರೆವ
ಆ ಕರೆಯು ನನಗೆ
ಉಸಿರು ನೀಡುತ್ತದೆ, ಧೈರ್ಯ ನೀಡುತ್ತದೆ
ಬಿಡಿಸಲಾರದ ಬಂಧ ನಮ್ಮದು

ಎಷ್ಟು ಸಶಸ್ತ್ರ ಪೊಲೀಸರು ಬಂದರೂ
ಆ ಕೆಂಪು ಚಿಗುರುಗಳನ್ನು
ಚಿವುಟಲಾರರು, ಬೇರ್ಪಡಿಸಲಾರರು
ಒಂದೇ ಗಿಡದಲ್ಲಿ ಅರಳುವ
ಮಮತೆ ನಮ್ಮದು
ಶೋಷಕ ರಾಜ್ಯವನ್ನು ಕಿತ್ತೆಸೆಯುವ
ವರ್ಗ ಹೋರಾಟದ ಅರಣ್ಯ ಮಕ್ಕಳು ನಾವು
ಕಷ್ಟಗಳನ್ನು ಹಂಚಿಕೊಳ್ಳುವ
ಪ್ರಾಣ ಮಿತ್ರರು ನಾವು
ಶ್ರಮಜೀವಿಗಳ ವಿಮುಕ್ತಿಗಾಗಿ
ಹೋರಾಡೋಣ
ಸ್ತ್ರೀಯರ ವಿಮುಕ್ತಿಗಾಗಿ
ತ್ಯಾಗ ಮಾಡೋಣ

ಹೋರಾಟಗಾರರ ಸ್ನೇಹ ನಮ್ಮದು
ನಿಮ್ಮ ಮಾತು ನನಗೆ
ಅಮ್ಮನ ರಾಗ ನೀಡುತ್ತದೆ
ಕಷ್ಟವನ್ನು ಕಣ್ಣೀರನು ಮರೆಸುವ
ಅಮ್ಮ ಅಪ್ಪ ಬಂಧು ಬಳಗ ನೀವೇ
ನನ್ನ ಕಷ್ಟವನ್ನು ಮರೆಸುವ
ವರ್ಗ ಹೋರಾಟದ ರಾಜಕೀಯವನ್ನು
ಕಲಿಸುವ ತಾಯಂದಿರು ನೀವೇ
ಹೇಳಲಾರದಷ್ಟು ಬಾಧೆಯಾಗಿದೆ ಸಂಗಾತಿಗಳೇ
ಯುದ್ಧರಂಗದಲ್ಲಿ ಬದುಕಿದ್ದರೆ
ಭೇಟಿಯಾಗೋಣ ...
ಇಲ್ಲದಿದ್ದರೆ ಕೆಂಪು ಹೂ
ವನದಲ್ಲಿ ಭೇಟಿಯಾಗೋಣ

- ಶ್ಯಾಮಲ